## ನಾಶ ಮಾಡಬೇಡಿ

ಹನುಮಂತ ಎಂಬ ಕುರಿಗಾಹಿ ಅದ್ಭುತವಾಗಿ ಹಾಡಿ ಮಿಂಚಿದ್ದಾರೆ. ಇಂತಹ ಕಲಾವಿದನಿಗೆ ಪ್ರೋತ್ಸಾಹ ನೀಡಿ ಬೆಳೆಸಬೇಕು. ಟೀವಿಗಳು ಮಾಡುತ್ತಿರುವುದು ಏನನ್ನ? ನಿತ್ಯವೂ ಅವರನ್ನೇ ತೋರಿಸುತ್ತಾ ಅಳತೆ ಮೀರಿ ಗಾಳಿ ತುಂಬುತ್ತಿವೆ. ಅವರ ಊರಿನವರಲ್ಲೇ ಕೆಲವರಲ್ಲಿ ಮತ್ಸರ ಹುಟ್ಟಿಸುವಂತೆ ಮಾಡಿದ್ದಾರೆ. ಈ 'ಅತಿ' ಎನ್ನವುದು ಆ ಹುಡುಗನಿಗೆ ಮಾರಕವಾಗುವುದರಲ್ಲಿ ಅನುಮಾನವೇ ಇಲ್ಲ. ದಯವಿಟ್ಟು ವಾಹಿನಿಗಳು ಅವನಿಂದ ಹಾಡಿಸಿ ಆರ್ಥಿಕ ನೆರವು ನೀಡಲಿ. ಅದನ್ನು ಬಿಟ್ಟು ಅನಗತ್ಯ ವಿಜೃಂಭಿಸಿ ಅವನ ನಾಶಕ್ಕೆ ಕಾರಣವಾಗದಿರಲಿ.

–ಸತ್ಯಬೋಧ, ಬೆಂಗಳೂರು

## ವಾಸ್ತವ ಅನ್ನಿಸಲಿ

ಕಲರ್ಸ್‌ನ 'ರಾಧಾರಮಣ'ದಲ್ಲಿ ನಿಜವಾದ ಅವನಿ ತನ್ನ ಸ್ವಂತ ಮನೆಗೆ ಬಂದರೂ, ತಾಯಿ ಕರುಳಿಗಾಗಲಿ ಅಥವ ಪ್ರೀತಿಯ ಅಣ್ಣನಿಗೆ ಗುರುತಿಸಲು ಆಗುವುದಿಲ್ಲ. ಅವನನ್ನು ಕರೆದುಕೊಂಡು ಹೋಗಲು ಬಂದ ಹೆಂಗಸಿಗೆ ಇವಳ್ಯಾರೋ ನನಗೆ ಗೊತ್ತಿಲ್ಲ ಎಂದು ಹೇಳಬಹುದಿತ್ತು. ದಿವಾಕರ್ ಅಂಕಲ್ ರಮಣ್ ನಿನ್ನ ಅಣ್ಣ ಎಂದು ಹೇಳಿದ್ದಾರೆ ಎಂಬ ಸತ್ಯವನ್ನು ಬಹಿರಂಗಪಡಿಸಬಹುದಿತ್ತು. ರಾಧಾಳಿಗಾಗಲೀ, ಮನೆಯವರಿಗಾಗಲೀ ಇಬ್ಬರೂ ಅವನಿ ಎಂಬ ಅನುಮಾನ ಸ್ವಲ್ಪವೂ ಇಲ್ಲ. ಸುಳ್ಳುಅವನಿ ಹೊರಗಡೆ ಮಾದ ಜೊತೆ ಚೆನ್ನಾಗಿ ಮಾತಾಡ್ತಾಳೆ ಮನೆಯಲ್ಲಿ ತೊದಲು ಮಾತಾಡ್ತಾಳೆ ಅನ್ನೋ ಸತ್ಯ ರಾಧಾಗೆ ಗೊತ್ತಿದೆ. ಈಗ ನಿಜ ಅವನಿ ಮನೆಗೆ ಬಂದಮೇಲೆ ಆ ಬಗ್ಗೆ ರಾಧಾಳಿಗೂ ಯಾವ ಸಂಶಯವೂ ಬರುವುದೇ ಇಲ್ಲ. ಕಥೆ ವಾಸ್ತವಕ್ಕೆ ಹತ್ತಿರವಾಗಿರಲಿ ಎಂಬುದು ನಮ್ಮ ಅನಿಸಿಕೆ. ಕಥೆಯನ್ನು ಸಿಕ್ಕಾಪಟ್ಟೆಎಳೆಯುತ್ತಿದ್ದಾರೆ, ಪ್ರೇಕ್ಷಕರಿಗೆ ಮನಮುಟ್ಟುವಂತೆ ಕಥೆಯನ್ನು ತೋರಿಸುವಂತಾಗಲಿ.

–ಚಂದ್ರಶೇಖರ ಹೆಚ್.ಬಿ. ಬೆಂಗಳೂರು

ಯುಗಾದಿ ವಿಶೇಷಾಂಕ 2019
ಇದೀಗ ಮಾರುಕಟ್ಟೆಯಲ್ಲಿ
ಸೀರಿಯಲ್ ಸುಂದರಿಯರು

ಮಾತುಕತೆ

ವಾರದ ಪತ್ರ

## ವಿಶ್ವ ಮಹಿಳಾ ದಿನಕ್ಕೆ ಅದ್ಭುತ ಕೊಡುಗೆ

ಚಂದನದ ಶುಭೋದಯ ಕರ್ನಾಟಕದ ಕಾರ್ಯಕ್ರಮಕ್ಕೆ ಮತ್ತೊಂದು ಗರಿ 'ಚಾಂದಿನಿ ಗಗನ್' ಅವರೊಡನೆ ನಡೆಸಿದ ಮಾತುಕತೆ. ಮಹಿಳೆಯರ ದಿನಾಚರಣೆಯನ್ನು ತಿಂಗಳ ಪೂರ್ತಿ ಮಹಿಳಾ ಸಾಧಕಿಯರನ್ನು ಕರೆಸಿ ನಿರೂಪಕಿಯರೆ ಸಂದರ್ಶಿಸುತ್ತಿರುವುದು ನಿಜಕ್ಕೂ ವಿಶೇಷ ಹಾಗೂ ಶ್ಲಾಘನೀಯ. ಉಷಾ ಪಿ.ರೈ, ಡಾ ಆಶಾ ದೊಡ್ಡಮನೆ ಬೆನಕಪ್ಪ ಅವರೊಡನೆ ನಡೆಸಿದ ಸಂಭಾಷಣೆಯು ತುಂಬಾ ಚೆನ್ನಾಗಿ ಮೂಡಿಬಂತು. ಡಾ. ಆಶಾರವರು ನವಜಾತ ಶಿಶುವಿನ ಲಾಲನೆಪಾಲನೆಯ ಬಗ್ಗೆ ಹಾಗೂ ತಾಯಿಯ ಎದೆ ಹಾಲಿನ ಪ್ರಾಮುಖ್ಯತೆ ಬಗ್ಗೆ ತಿಳಿಸಲು ಅವರು ಕೈಗೊಂಡ ಕಾರ್ಯಕ್ರಮಗಳನ್ನು ಕೇಳಿ, ಇನ್ನಷ್ಟು ವರ್ಷ ಅವರು ಸರ್ಕಾರಿ ಸೇವೆಯಲ್ಲಿ ಇರಬಾರದಿತ್ತೇ ಎಂದು ಅನ್ನಿಸಿತು.

ಚಾಂದನಿ ಅವರೊಡನೆ ನಡೆಸಿದ ಸಂದರ್ಶನ ಅದ್ಭುತವಾಗಿತ್ತು. ನಿಸ್ಸಂಕೋಚವಾಗಿ ನಿರೂಪಕಿಯರು ಪ್ರಶ್ನೆ ಕೇಳಿದ ರೀತಿ, ನಿರ್ಭಿಡೆಯಿಂದ ಚಾಂದನಿಯವರು ಉತ್ತರಿಸಿದ ರೀತಿ ಮನೋಜ್ಞವಾಗಿತ್ತು. ನೋಡುಗರಿಗೆ ಒಂದು ಭಿನ್ನ ಲೋಕದ ಪರಿಚಯ ಮಾಡಿಸಿದಂತಾಯಿತು. ಚಾಂದಿನಿಯವರು ಅವರ ಸಮುದಾಯದ ನಡವಳಿಕೆಗೆ ಕಾರಣಗಳು ಸಮಾಜದಲ್ಲಿ ಆಗಬೇಕಾದ ಬದಲಾವಣೆಗಳು, ಸರ್ಕಾರದ ಜವಾಬ್ದಾರಿಯ ಬಗ್ಗೆ ಒಂದು ಒಳ ನೋಟವನ್ನು ವೀಕ್ಷಕರಿಗೆ ನೀಡಿದರು. ಚಂದನ ಚಂದನವೆಂದು ಸಾಬೀತು ಪಡಿಸಿದ ಕಾರ್ಯಕ್ರಮ ಇದಾಗಿತ್ತು ಎಂದರೆ ಉತ್ಪ್ರೇಕ್ಷೆಯಲ್ಲ. ಚಂದನದ ಶುಭೋದಕ್ಕೆ ಅಭಿನಂದನೆಗಳು.

–ಮಲ್ಲಿಕಾರ್ಜುನ ಎಂ. ಬೆಂಗಳೂರು

## ರೋಮಾಂಚನ

ನಿರಂಜನ ಚಂದು ಭಾರ್ಗಿಗೆ ಎಸೆದ ಸವಾಲು ರೋಮಾಂಚನ ಸೃಷ್ಟಿಸಿದೆ. ಸಿಎಸ್ಸಿ ಮಗನಿಗೆ ಬೆಂಬಲವಾಗಿ ವಿದೇಶಕ್ಕೆ ಪ್ರಯಾಣ ಬೆಳೆಸಿದ್ದು ರೋಚಕಘಟ್ಟ ತಲುಪಿದೆ. ಇನ್ನು 'ಮಗಳು ಜಾನಕಿ' ಕುತೂಹಲಕಾರಿ.

–ಜಯದೇವಪ್ಪ, ಹಾಸನ

## ಮಾದರಿ ಕಥೆ

'ಗಟ್ಟಿಮೇಳ' ಧಾರಾವಾಹಿಯ ಕಥೆ ಯಾವುದೇ ಒಂದು ಕುಟುಂಬದಲ್ಲಿ ಹೆತ್ತ ತಾಯಿಯ ಪಾತ್ರ ಬಲು ಮುಖ್ಯ. ಮಕ್ಕಳು ಸರಿಯಾದ ಶಿಕ್ಷಣ ಪಡೆದು ತಮ್ಮ ಮುಂದಿನ ಭವಿಷ್ಯ ರಚನೆಗೆ ತಾಯಿ ಹಾಕುವ ಮಾನವೀಯ ಭದ್ರ ಬುನಾದಿ ಎನ್ನುವ ಕಥಾ ಹಂದರ ಒಳಗೊಂಡ ಕಥೆ. ಅಪ್ಪನಾದವನು ತನ್ನ ಕರ್ತವ್ಯವನ್ನು ಸರಿಯಾದ ರೀತಿಯಲ್ಲಿ ನಿರ್ವಹಿಸದೆ ಇದ್ದರೂ ತಾಯಿಯಾದವಳು ತನ್ನ ಗಟ್ಟಿ ನಿರ್ಧಾರದಿಂದ ಸುಳಿಗೆ ಸಿಲುಕಿದ ಬಾಳ ನೌಕೆಯನ್ನು ಹೇಗೆ ದಡ ಸೇರಿಸಬಲ್ಲಳು ಎಂಬ ಸರ್ವಕಾಲಿಕ ಸತ್ಯವನ್ನು ಪ್ರತಿಪಾದಿಸುತ್ತಿರುವ ಧಾರಾವಾಹಿ ಗಟ್ಟಿಮೇಳ. ವ್ಯಕ್ತಿ ಸಮಾಜ ಪರಿವರ್ತನೆ ಇಂತಹ ಧಾರಾವಾಹಿಗಳು ಬಲು ಅವಶ್ಯ.

–ಕುಬೇರಪ್ಪ ಎಂ. ವಿಭೂತಿ, ಹರಿಹರ

## ಪ್ರೀತಿ ಅತಿಯಾಯ್ತು

'ಜೋಡಿ ಹಕ್ಕಿ' ಮೊದಲು ಚೆನ್ನಾಗಿ ಬರುತ್ತಿತ್ತು. ಇತ್ತೀಚೆಗಂತೂ ಇವರ ಮೇಲೆ ಅವರು, ಅವರ ಮೇಲೆ ಇವರು ದ್ವೇಷ ಸಾಧಿಸುವುದೇ ಆಯ್ತು. ಬೇರೆ ಏನೂ ಇಲ್ಲ. ಆದಷ್ಟು ಬೇಗ ಕತೆ ಮುಗಿದರೆ ಒಳ್ಳೆಯದು.

ಜಾನಕಿ– ರಾಮು ಹಾದಿಯಲ್ಲಿ ಹೋಗುವಾಗ ಚಪ್ಪಲಿ ಉಂಗುಷ್ಟ ಕಿತ್ತು ಹೋಯ್ತು. ಜಾನಕಿ ಅಷ್ಟೆಲ್ಲ ಮೇಕಪ್ ಮಾಡಿಕೊಂಡು ಹಳೆ ಚಪ್ಪಲಿ ಹಾಕಿರುತ್ತಾಳೆ. ಅವಳು ಬರಿಗಾಲಲ್ಲಿ ನಡೆಯಬಾರದೆಂದು ಅಂಗಡಿಯವರೆಗೆ ಅವಳನ್ನು ಎತ್ತಿಕೊಂಡು ರಾಮು ಹೋಗುತ್ತಾನೆ. ಇಂತಹ ಅತಿರೇಕದ ಅಸಹಜ ದೃಶ್ಯಗಳು ಬೇಕಿತ್ತಾ?

–ರುಕ್ಮಿಣಿ ಕೃ.ದೇಶಪಾಂಡೆ ಗೋಕಾಕ

## ಇಂಥ ಧಾರಾವಾಹಿಗಳು ಬೇಕೆ?

ಟೀವಿಯ ಬಹುತೇಕ ಧಾರಾವಾಹಿಗಳನ್ನು ನೋಡಿದರೆ ಮೋಸ, ವಂಚನೆ, ದ್ರೋಹವೇ ತುಂಬಿದೆ. ಮನರಂಜನೆ ಹೆಸರಿನಲ್ಲಿ ನಿರ್ದೇಶಕರು ವೀಕ್ಷಕರನ್ನು ಬಕರಾಗಳನ್ನಾಗಿ ಮಾಡುತ್ತಿರುವುದು ನಿಜಕ್ಕೂ ದೊಡ್ಡ ದುರಂತ ಎಂದೇ ಹೇಳಬೇಕಾಗಿದೆ.

ಹಲವು ವರ್ಷಗಳಿಂದ ಎಳೆದಾಡಿಕೊಂಡು ಬರುತ್ತಿರುವ 'ಅಗ್ನಿಸಾಕ್ಷಿ', 'ಲಕ್ಷ್ಮೀ ಬಾರಮ್ಮ', 'ಪುಟ್ಟಗೌರಿ ಮದುವೆ', 'ಕುಲವಧು' ನಿಜಕ್ಕೂ ಬೇಸರ ತರಿಸುತ್ತಿವೆ. ಬೇಗ ಇವುಗಳನ್ನು ಮುಗಿಸಿ ಮುಕ್ತಿ ಕೊಡಿ. ಒಟ್ಟಾರೆ ಇಂದಿನ ಕುಲಗೆಟ್ಟ ಧಾರಾವಾಹಿಗಳಿಂದ ಆರೋಗ್ಯವಂತ ವೀಕ್ಷಕರೂ ಬೀಪಿ, ಶುಗರ್‌ಗೆ ತುತ್ತಾಗುವುದರಲ್ಲಿ ಸಂದೇಹವೇ ಇಲ್ಲ.

–ಎನ್.ಜಿ. ವೇಣುಗೋಪಾಲ್, ಬೆಂಗಳೂರು